ಡಬ್ಬಿಗೆ ಸರಿಹೋಗಲ್ಲ. ಹಣ ವೇಸ್ಟ್ ಮಾಡುವುದರಲ್ಲಿ ನೀವು ನಿಸ್ಸೀಮರು. ಐನೂರು ರೂಪಾಯಿ ತಿಂಡಿ ಕೆಲಸದವಳಿಗೆ ಕೊಡುವುದಕ್ಕೆ ನಿಮಗೆ ಹೊಟ್ಟೆ ಉರಿಯಲ್ವಾಂತ ಬೈದಳು.'

'ಸರಿ. ಇನ್ಯಾವ ವಿಚಾರದಲ್ಲಿ ಸಿಡುಕ್ತಿರ್ತಾಳೆ?'

'ನಿಮ್ಮಮ್ಮ, ಅಪ್ಪ ನಿಮ್ಮನ್ನು ಅತಿ ಮುದ್ದು ಮಾಡಿ ಹಾಳ್ಮಾಡಿದ್ದಾರೆ. ಒಂದು ಕೆಲಸಕ್ಕೆ ಕೈ ಹಾಕಲ್ಲ. ಬಿಚ್ಚಿದ ಬಟ್ಟೆ ಎಸೆದಿರ್ತೀರ. ಆಫೀಸ್‌ನಿಂದ ತಂದ ಡಬ್ಬಿಗಳು ಬ್ಯಾಗ್‌ನಲ್ಲೇ ಕೂತಿರುತ್ತವೆ. ಒಂದು ದಿನ ಬೆಡ್‌ಶೀಟ್, ರಗ್ಗು ಮಡಿಸಲ್ಲ. ಯಾವ ವಿಚಾರಕ್ಕೂ ತಲೆಕೆಡಿಸಿಕೊಳ್ಳಲ್ಲ. ಎಲ್ಲದಕ್ಕೂ ನಾನೇ ಸಾಯಬೇಕು ಅಂತಿರ್ತಾಳೆ.'

'ಸಂಧ್ಯಾ ಒಳ್ಳೆಯ ಹುಡುಗಿ. ಅವಳು ಕಾರಣವಿಲ್ಲದೆ ಆಕ್ಷೇಪಣೆ ಮಾಡಲ್ಲ ಬಿಡು.'

ಹೆಂಡತಿ ಸೊಸೆಯನ್ನು ವಹಿಸಿಕೊಂಡು ಮಾತಾಡಿದಾಗ ಸತ್ಯಮೂರ್ತಿಗಳ ಕಿವಿ ಚುರುಕಾಯಿತು.



'ಏನಮ್ಮ ನೀನು ಹಾಗಂತೀಯ? ನೀವು ಮುದ್ದು ಮಾಡಿ ನನ್ನನ್ನು ಹಾಳ್ಮಾಡಿದ್ದೀರಾ?'

'ನೋಡಪ್ಪ, ನಮ್ಮ ಕಾಲದಲ್ಲಿ ಹೆಂಗಸರು ಮನೆಯಲ್ಲಿರ್ತಿದ್ವಿ. ಗಂಡಸರು ಹೊರಗೆ ಹೋಗಿ ದುಡಿಯೋರು. ನಾವು ಗಂಡ ಮಕ್ಕಳ ಬೇಕು–ಬೇಡ ನಡೆಸ್ತಾ, ಅಡುಗೆ ಮನೆಯಲ್ಲಿ ಬೇಯಿಸ್ತಾ, ಬಟ್ಟೆ ಒಗೀತಾ, ಪಾತ್ರೆ ತೊಳೆಯುತ್ತಾ, ನೆಲ ಗುಡಿಸ್ತಾ, ಸಾರಿಸುತ್ತಾ, ಹಬ್ಬ ಹರಿದಿನಗಳಿಗೆ ಎಲ್ಲಾ ಅಣಿ ಮಾಡ್ತಾ ಇಷ್ಟೇ ಪ್ರಪಂಚ ಅಂದುಕೊಂಡಿದ್ವಿ. ಈಗ ಹಾಗಿದೆಯಾ?'

'ನಿನ್ನ ಸೊಸೆ ಕೆಲಸ ಮಾಡದಿದ್ರೆ ನಮ್ಮ ಮನೆ ನಡೆಯಲ್ವೇನಮ್ಮಾ?'

'ಸಂಧ್ಯಾ ಮದುವೆಗೆ ಮೊದಲೇ ಕೆಲಸ ಬಿಡಲ್ಲಾಂತ ಹೇಳಿದ್ದಳಲ್ಲವಾ? ಅವಳು ತಾನೆ ಎಷ್ಟು ಕೆಲಸ ಮಾಡ್ತಾಳೆ? ನೀನು ಹೆಲ್ಪ್ ಮಾಡಬೇಕಲ್ವಾ?'

'ನಾನೇನೂ ಕೆಲಸಾನೇ ಮಾಡಲ್ವೇನಮ್ಮಾ?'

'ನಿಮ್ಮನೆಯಲ್ಲಿ ಅಡುಗೆ ಮನೆ ಜವಾಬ್ದಾರಿ ನಿರ್ವಹಿಸೋದು ಯಾರು?'

'ನಿನ್ನ ಸೊಸೇನೆ...'

'ಅವಳೇ ನಿಮ್ಮ ಬಾಕ್ಸ್‌ಗೆ ಹಾಕಿ, ನೀರು ತುಂಬಿಕೊಡ್ತಾಳೆ. ನಿಮ್ಮ ಬಟ್ಟೆ ಒಗೆಸಿ, ಐರನ್‌ಗೆ ಕಳಿಸ್ತಾಳೆ. ಆನ್‌ಲೈನ್‌ನಲ್ಲಿ ಸಾಮಾನು ತರಿಸ್ತಾಳೆ. ಸ್ಕೂಲಿಂದ ಬರುವಾಗ ತಾನೇ ತರಕಾರಿ ತರ್ತಾಳೆ. ಮಕ್ಕಳನ್ನು ಸ್ಕೂಲಿಗೆ ಬಿಡ್ತಾಳೆ. ಪೇರೆಂಟ್ಸ್ ಮೀಟಿಂಗ್ ತಾನೇ ಅಟೆಂಡ್ ಮಾಡ್ತಾಳೆ. ಮಕ್ಕಳಿಗೆ ಹೋಂವರ್ಕ್ ಮಾಡಿಸ್ತಾಳೆ. ಪರೀಕ್ಷೆ ಟೈಂನಲ್ಲಿ ಓದಿಸ್ತಾಳೆ. ನೀನು ಏನೇನು ಕೆಲಸ ಮಾಡ್ತೀಯ ಹೇಳು.'

ಮೋಹನ ಮಾತಾಡಲಿಲ್ಲ.

'ನಿಮಗೆ ಡಬ್ಬಿ ತೊಳೆಯಕ್ಕೆ ಹಾಕಕ್ಕೆ ಸೋಮಾರಿತನ. ಎದ್ದ ಕೂಡಲೇ ರಗ್ ಮಡಿಸಕ್ಕೆ ಸೋಮಾರಿತನ. ತಿಂದ ತಟ್ಟೆ ತೊಳೆಯೋದು ಬೇಡ, ಸಿಂಕ್‌ಗೆ ಹಾಕಕ್ಕೆ ಸೋಮಾರಿತನ. ಅಲಕಾಗೆ 12 ವರ್ಷ. ಅವಳಿಗೆ ಸಣ್ಣ ಪುಟ್ಟ ಕೆಲಸ ಹೇಳಿದ್ರೆ ನೀನು ಮುಖ ಊದಿಸಿಕೊಳ್ತೀಯ. ಸಂಧ್ಯಾ ತಾನೆ ಯಾವ ಯಾವ ವಿಚಾರಕ್ಕೆ ಗಮನಹರಿಸ್ತಾಳೆ?'

'ಅವಳು ಕೆಲಸ ಹೇಳಿದ್ರೆ ನಾನು ಮಾಡಲ್ಲವೇನಮ್ಮಾ?'

'ನೀನೇ ತಿಳಿದುಕೊಂಡು ಕೆಲಸ ಮಾಡು. ಶನಿವಾರ ಮನೇಲಿರ್ತೀಯಲ್ಲಾ... ಅನ್ನ, ಹುಳಿ ಮಾಡು. ಬೆಳಿಗ್ಗೆ ಆನ್‌ಲೈನ್‌ನಲ್ಲಿ ತಿಂಡಿ ತರಿಸು...'

'ತರಿಸ್ತೀನಲ್ಲಮ್ಮಾ?'

'ಶನಿವಾರ ಅವರುಗಳಿಗೆ ಶಾಲೆಗೆ ಹೋಗುವ ಆತುರ. ನೀನು ಮಸಾಲ ದೋಸೆ ತರಿಸಿದ್ರೆ ತಿನ್ನಕ್ಕಾಗುತ್ತದಾ? ದೋಸೆ ಡಬ್ಬಿಗೆ ಹಾಕಿಕೊಂಡು ಹೋಗಕ್ಕಾಗತ್ತಾ?'

'ನನಗೆ ಗೊತ್ತಾಗಲಿಲ್ಲಮ್ಮ. ಸಂಧ್ಯಾ ಕೆಲಸ ಬಿಟ್ಟರೆ ಎಲ್ಲಾ ಸರಿಹೋಗತ್ತೆ.'

'ಅವಳು ಕೆಲಸ ಮಾಡುವುದರಿಂದ ನಿನಗೆ ಲಾಭ ಆಗಿಲ್ವಾ? ಸಂಧ್ಯಾ ಜಾಣೆ. ಪ್ರತಿ ತಿಂಗಳೂ ಹತ್ತು ಸಾವಿರ ರೂ. ಕಟ್ಟುವ ಹಾಗೆ ಆರ್.ಡಿ. ಮಾಡಿ, ನೀನು ಫ್ಲಾಟ್ ತೆಗೆದುಕೊಳ್ಳುವಾಗ 12 ಲಕ್ಷ ಕೊಡಲಿಲ್ವಾ?'

'ನೋಡಮ್ಮ, ನಾನು ಊಟ–ತಿಂಡಿ ವಿಚಾರದಲ್ಲಿ ತುಂಬಾ ಪರ್ಟಿಕ್ಯುಲರ್. ನಮ್ಮನೆಯಲ್ಲಿ ಮಸಾಲ